# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

**ಎಸ್ ಸಿ /ಎಸ್ ಟಿ ನಂ : 16/2023**

ಪ್ರ.ವ.ಬೋ. ದಿನಾಂಕ – 12.11.2025

| | | | |
|---|---|---|---|
| ಸಾಕ್ಷಿದಾರರ ಹೆಸರು | – ಮಹಾಂತೇಶ ನಾಯ್ಕ | ಪ್ರಾಸಾ | 07 |
| ತಂದೆಯ ಹೆಸರು | – ದಾಸ್ಯನಾಯ್ಕ | ಚಾಸಾ | 07 |
| ವಯಸ್ಸು | – 40 ವರ್ಷ | | |
| ಉದ್ಯೋಗ | – ವ್ಯವಸಾಯ | | |
| ವಾಸ ಸ್ಥಳ | – ವಲಸೆ ಗ್ರಾಮ | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ಚಾಸಾ:1 ಗೊತ್ತು. ಚಾಸಾ:6, 8 ಗೊತ್ತು. ಆರೋಪಿಗಳು ಗೊತ್ತು. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿ ಗೈರು ಹಾಜರಿದ್ದು ಆರೋಪಿಯನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ಆರೋಪಿಪರ ವಕೀಲರು ತಿಳಿಸಿರುತ್ತಾರೆ. 26.1.2023 ರಂದು ನಾನು ಮಧ್ಯಾಹ್ನ 1 ಗಂಟೆಗೆ ನಾನು ನನ್ನ ಜಮೀನಿನಲ್ಲಿ ಇದ್ದೆನು. ಆ ಸಮಯದಲ್ಲಿ ಚಾಸಾ:1 ಮತ್ತು ಆರೋಪಿತರ ನಡುವೆ ಗಲಾಟೆ ಆಗುತ್ತಿದ್ದು ಚಾಸಾ:1 ರವರ ತಲೆಗೆ ರಕ್ತಗಾಯ ಆಗಿತ್ತು. ಆರೋಪಿಗಳು ಚಾಸಾ:1 ರವರ ಜಮೀನಿನಲ್ಲಿ ದನ ಬಿಟ್ಟಿದ್ದು ಈ ವಿಚಾರವಾಗಿ ಗಲಾಟೆ ಆಗಿತ್ತು. ಚಾಸಾ:1 ಆರೋಪಿತರಿಗೆ ದನ ಮತ್ತು ಕರುಗಳ ತಮ್ಮ ಜಮೀನಿನಿಂದ ತೆಗೆದುಕೊಂಡು ಹೋಗುವಂತೆ ಹೇಳಿದ್ದು ಈ ವಿಚಾರದಲ್ಲಿ ಆರೋಪಿತರು ಚಾಸಾ:1 ರವರ ಜೊತೆ ಜಗಳ ತೆಗೆದು ಹೊಡೆದಿರುತ್ತಾರೆ. ಚಾಸಾ:1 ರವರಿಗೆ ಲಂಬಾಣಿ ಸೂಳೆ ಮಕ್ಕಳಾ ಏನು ಮಾಡಿಕೊಳ್ಳುತ್ತೀರಿ ಎಂದು ಬೈದು ಹೊಡೆದು ಕೊಲೆ ಬೆದರಿಕೆ ಹಾಕಿರುತ್ತಾರೆ. 2 ನೇ ಆರೋಪಿಯು ದೊಣ್ಣೆಯಿಂದ ಚಾಸಾ:1 ರವರ ತಲೆಯ ಎಡಭಾಗಕ್ಕೆ ಹೊಡೆದಿದ್ದು ಅವರಿಗೆ ರಕ್ತಗಾಯ

ಆಗಿರುತ್ತದೆ. ನಂತರ ನಾನು ಚಾಸಾ:6, 8 ಜಗಳ ಬಿಡಿಸಿರುತ್ತೇವೆ. ನಂತರ ಅಂಬ್ಯುಲನ್ಸ್ ಮೂಲಕ ಚಾಸಾ:1 ರವರನ್ನು ಚಳ್ಳಕೆರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಈ ಬಗ್ಗೆ ಚಾಸಾ:1 ದೂರು ನೀಡಿರುತ್ತಾರೆ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

**(ಪಾಟೀ ಸವಾಲು ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ರೂ 500/- ರ ಖರ್ಚಿನೊಂದಿಗೆ ಮುಂದೂಡಲಾಗಿದೆ.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
*ಓದಿ ಹೇಳಿ ಕೇಳಿ ಸರಿ ಇದೆ.*

*ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ*
*ನ್ಯಾಯಾಧೀಶರು, ಚಿತ್ರದುರ್ಗ.*

ಸಾಕ್ಷಿಯನ್ನು ದಿ. 29.1.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಪಾಟೀಸವಾಲು - ಆರೋಪಿಪರ ಶ್ರೀ ಕೆ.ಎಂ.ಎನ್. ವಕೀಲರಿಂದ -**

ನಾನು ಎಸ್.ಎಸ್.ಎಲ್.ಸಿ. ವರೆಗೆ ಓದಿರುತ್ತೇನೆ. ಚಾಸಾ:1 ಮತ್ತು ನಾವು ಒಂದೇ ಊರಿನವರು, ಕುಲಸ್ಥರು ಎಂದರೆ ಸರಿ. ನಮ್ಮ ಜಮೀನಿನ ಸರ್ವೇ ನಂ. 53, ಅದು ಒಲಸೆ ಗ್ರಾಮಕ್ಕೆ ಸೇರಿದ್ದು. ಅದು ನಮ್ಮ ತಾಯಿ ಲಕ್ಷ್ಮೀಬಾಯಿ ಹೆಸರಿಗೆ ಇರುತ್ತದೆ.

ನಮ್ಮ ಜಮೀನಿಗೂ, ಬಂಜೆಗೆರೆಗೂ ಸುಮಾರು ಒಂದು ಕಿ.ಮೀ. ಆಗುತ್ತದೆ. ಚಾಸಾ:1 ರವರ ಜಮೀನಿನ ಸರ್ವೇ ನಂಬರು ನನಗೆ ಗೊತ್ತಿಲ್ಲ. ಚಾಸಾ:1 ರವರ ಜಮೀನಿನ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ದಿನಾಂಕ 26.1.2023 ನಾನು ನನ್ನ ಜಮೀನಿನಲ್ಲಿ ಇದ್ದಾಗ, ಆ ಸಮಯದಲ್ಲಿ ಚಾಸಾ:1 ಮತ್ತು ಆರೋಪಿತರ ನಡುವೆ

ಗಲಾಟೆ ಆಗುತ್ತಿತ್ತು, ಚಾಸಾ:1 ರವರ ಜಮೀನಿನಲ್ಲಿ ದನಗಳನ್ನು ಬಿಟ್ಟಿದ್ದರು ಆಗ ಚಾಸಾ:1 ರವರು ಆರೋಪಿತರಿಗೆ ದನಗಳನ್ನು ತೆಗೆದುಕೊಂಡು ಹೋಗುವಂತೆ ಹೇಳಿದ್ದು, ಆ ವಿಷಯದಲ್ಲಿ ಆರೋಪಿತರು ಚಾಸಾ:1 ರವರಿಗೆ ಲಂಬಾಣಿ ಸೂಳೆ ಮಗನೇ, ಬೋಳಿ ಮಗನೇ, ನಿನ್ನದು ಅತಿಯಾಯ್ತು ಎಂದು ಬೈದು, 2 ನೇ ಆರೋಪಿ ಅಲ್ಲಿಗೆ ಬಂದು ದೊಣ್ಣೆಯಿಂದ ಚಾಸಾ:1 ರವರ ತಲೆಯ ಎಡಭಾಗಕ್ಕೆ ಹೊಡೆದ, 2 ನೇ ಆರೋಪಿ ಚಾಸಾ:1 ರವರಿಗೆ ಕೊಲೆ ಬೆದರಿಕೆ ಹಾಕಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರಿಗೆ ನಾನು ಹೇಳಿಕೆ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿ. 29.1.2023 ರಂದು ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಡಿವೈಎಸ್‌ಪಿ ಕಚೇರಿಯಲ್ಲಿ ಮತ್ತು ಘಟನಾ ಸ್ಥಳದಲ್ಲಿ ಹೇಳಿಕೆ ನೀಡಿರುತ್ತೇನೆ. ಪೋಲಿಸರು ದೂರನ್ನು ಆಸ್ಪತ್ರೆಯಲ್ಲಿ ಪಡೆದಿದ್ದು, ಆ ಸಮಯದಲ್ಲಿ ನಾನು ಇದ್ದೆ. ಚಾಸಾ:1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕುರಿ ಕಳ್ಳತನದ ವಿಚಾರದಲ್ಲಿ ಚಾಸಾ:1 ಮತ್ತು ಆರೋಪಿತರ ನಡುವೆ ಹಿಂದೆ ಪಂಚಾಯತಿ ಆಗಿತ್ತು ಎಂದರೆ ಸರಿಯಲ್ಲ. ಸದರಿ ದ್ವೇಷದಿಂದ ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

*ಓದಿ ಹೇಳಿ ಕೇಳಿ ಸರಿ ಇದೆ.*

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.